> ಸ್ಟೇಷನ್ನಿನಲ್ಲಿ ಪೊಲೀಸರು ಕೇಳಿದ ಪ್ರಶ್ನೆಗಳಿಗೆಲ್ಲಾ ಕೊಂಗುನಾದನಿಗೆ ಹೌದೆನ್ನಬೇಕೋ ಇಲ್ಲವೆನ್ನಬೇಕೋ ಗೊತ್ತೇ ಆಗಲಿಲ್ಲ. ಕಟಬಾಯಲ್ಲಿ ಜೊಲ್ಲು ಸುರಿಸುತ್ತ ಒಂದೊಂದು ಮಿನಿಟಿಗೆ ಒಂದೊಂದು ಮಾತಾಡಿದ.

'... ಒಂದು ಕತ್ತಲ ರಾತ್ರಿಯಲ್ಲಿ ಅರಣ್ಯದ ಬತ್ತಿದ ಸರೋವರಗಳ ತಡಿಯಲ್ಲಿ ಅದೆಷ್ಟೋ ಜನ ಹೆಣ್ಣು ಮಕ್ಕಳು ಕೈಯೆತ್ತಿ ಯಾರನ್ನೋ ಬೇಡುವಂತೆ, ಮೊರೆ ಇಡುವಂತೆ ಬಸಿರು ಹೊಸೆಯುತ್ತ ನಿಂತಿದ್ದರು. ಅವರ ಮೈಮೇಲಿನ ಆಭರಣಗಳೆಲ್ಲವೂ ಚೆಲ್ಲಿ ಸೂಸಿದ್ದವು. ಜೋಲು ಬಿದ್ದ ವಸ್ತ್ರ, ಇಳಿಬಿದ್ದ ಮುಡಿ ಕೂದಲು. ಅವರು ಕೂಗಿ ಕರೆಯುತ್ತ ಆಡುತ್ತಿದ್ದ ಮಾತುಗಳು ಸ್ವಲ್ಪಸ್ವಲ್ಪವೇ ಕೇಳಿಸುತ್ತಿತ್ತು. ಕಂಕುಳಲ್ಲಿ, ಕಾಲ ಬುಡದಲ್ಲಿ ಚಿಕ್ಕಮಕ್ಕಳು. ಅವರೆಲ್ಲಾ ಸೈನಿಕರ ಹೆಂಡದಿರು. ಯುದ್ಧದಲ್ಲಿ ಗಂಡಂದಿರೆಲ್ಲಾ ಮಡಿದು ಬೀಳಲಾಗಿ ದಿಕ್ಕುಗೆಟ್ಟು ಅರಣ್ಯಮಾರ್ಗ ಹಿಡಿದು ಬಂದು ತಮ್ಮ ಕಥೆಯನ್ನು ಹೇಳಿಕೊಳ್ಳಲು ಯಾವುದಾದರೂ ಕರುಣಾಳು ದೈವವು ಪ್ರತ್ಯಕ್ಷವಾಗುವುದೇ ಎಂಬಂತೆ ಕಾಯುತ್ತಾ ನಿಂತಿದ್ದರು...'

ಆಗ ಕಣ್ಣಾಸೆಲ್ವಿಯು ಕೊಂಚ ವ್ಯಥೆಯ ಮುಖದಲ್ಲಿ ಸದ್ಯ ನಿನಗೆ ದಾರಿಯಲ್ಲಿ ಹೆಂಗಸರೇ ಎದುರಾದರಲ್ಲ ಆನೆ, ಹುಲಿ, ಕರಡಿ, ಕಾಡೆಮ್ಮೆ ಸಿಕ್ಕಿಬಿಟ್ಟಿದ್ದರೆ ಏನು ಗತಿ ಅಂತ ಭಯವಾಯಿತು ಎಂದಳು.

ಆಗ ತಂಗಮಣಿ, 'ಹುಲಿ, ಆನೆ ಎದುರು ಬರಲಿಲ್ಲ ಅಂದೆಯಲ್ಲಾ ಇಲ್ಲಿ ಕೇಳು. ಅಸಾಧ್ಯ ಬಿಸಿಲಿನ ಸೂರ್ಯ ಪ್ರಕಾಶ ಹಗಲಿನಲ್ಲಿ ಕಾಡೊಳಗಿನ ಒಣ ಹುದುಗಲಿನಲ್ಲಿ ಹುಲಿಯೊಂದು ಅತ್ತಿತ್ತ ಅಲುಗಾಡದಂತೆ ತೊಳಲಾಡುತ್ತಿತ್ತು. ನಾನು ಲಾರಿ ನಿಲ್ಲಿಸಿ ಅದರ ಬಳಿ ಹೋಗಿ ಕಾಟ್ಟುರಾಜ ನಿನ್ನಂಥವನ ಗತಿ ಹೀಗಾಯಿತೇ ಅಂತ ಅದರ ಸುತ್ತಣ ಮುಳ್ಳುಕಂಟಿಯನ್ನೆಲ್ಲ ಬಿಡಿಸಿದೆ. ಹೊರಗೆ ಬಂದ ಹುಲಿ ಎಲೈ ನರಮಾನವನೆ ನನಗೆ ಹಸಿವು ಹೊಗೆಯಾಡುತ್ತಿದೆ, ನಿನ್ನನ್ನೇ ತಿನ್ನುವೆನೆಂದಿತು. ಆಗ ನಾನು ಅಯ್ಯಾ ಹುಲಿರಾಯನೆ, ಎಲ್ಲಿಯಾದರೂ ಹಸಿದವರು ಹಸಿದವರನ್ನೇ ತಿಂದುಹಾಕುವುದುಂಟೇ? ತಾಳು ನನ್ನ ಹಸಿವು ತೀರಿಸಿಕೊಂಡು ನಿನಗೂ ಆಹಾರ ತರುವೆನೆಂದು ಲಾರಿ ಹತ್ತಿದೆ. ಕತ್ತಲಾಗುತ್ತಾ ಮುಂದೆ ನನಗಾಗಲಿ, ಹುಲಿಗಾಗಲಿ ಆಹಾರ ಸಿಕ್ಕುವುದಿರಲಿ ಮತ್ತೆ ಅಲ್ಲಿ ದಾರಿಗೆ ಅಡ್ಡಲಾಗಿ ಕಂಡದ್ದೇನು ಗೊತ್ತೆ! ಕಡುಗಪ್ಪು ಬಣ್ಣಕ್ಕೆ ಮಿರಿ ಮಿರಿ ಮಿಂಚುವ ಕಾಳಿಂಗ ನಾಗರಹಾವು ರಸ್ತೆಯಲ್ಲಿ ಸಾವಧಾನ ಹರಿಯುತ್ತಿದೆ. ನಾನೇನು ಮಾಡಿದೆನೆಂದರೆ ಕಡವುಳೇ ಅದು ರಸ್ತೆ ದಾಟಿ ಹೊತ್ತೆ ಸೆತ್ತೆ ಸೇರಿಕೊಳ್ಳಲಿ ಎಂದು ಲೈಟು ಕೆಡಿಸಿ ಲಾರಿ ನಿಲ್ಲಿಸಿದೆ. ನೋಡುತ್ತೇನೆ ಕತ್ತಲಲ್ಲಿ ಆ ನಾಗರ ಹೆಡೆಯ ಮೇಲೆ ವಜ್ರದಂಥ ಮಣಿ ಥಳಥಳಾ ಹೊಳೆಯುತ್ತಿದೆ' ಎಂದವನು, 'ಮಗಳೇ ನೋಡುತ್ತಿರು ಒಂದಲ್ಲಾ ಒಂದು ದಿನ ನಿನಗೆ ಅದೇ ಥರದ ಮಣಿಗಳನ್ನು ಅದೆಷ್ಟು ತಂದುಕೊಡುವೆ' ಎಂದ.

ಕಣ್ಣಾಸೆಲ್ವಿ ತನ್ನ ಪುಟ್ಟ ಕೈಗಳಿಂದ ಕೆನ್ನೆಯನ್ನು ಅವುಚಿಕೊಂಡು, 'ಅಪ್ಪಾ ನನಗೆ ಆ ಮಣಿಯೇ ವೇಂಡಾ. ನೀನು ಆ ಹಾವಿನ ಪಕ್ಕಮೇ ಪೋಗವೇಂಡಾ. ನಾನು ಚಿತ್ರದಲ್ಲಿ ನೋಡಿದ್ದೇನೆ. ಅದರ ಎರಡು ನಾಲಿಗೆ, ಹೆಡೆ ಅಬ್ಬಬ್ಬಾ' ಅಂದಳು. ತಂಗಮಣಿ ಭಯದ ಮುಖ ಬದಲಾಯಿಸಿ ನಗುತ್ತ ಮಗಳೇ ನಿನಗೆ ನನ್ನ ಮೇಲೆ ಅದೆಷ್ಟು ಪ್ರೀತಿ ಅಂದನು.

ಇಂಥದೇ ಮಾತುಕತೆಯ ಮೇಲೆ ಅಪ್ಪನೂ, ಕೊಂಗನೂ ಕಟ್ಟೆಯ ಮೇಲೇ ಭೋಜನಗೈಯ್ಯುತ್ತಿದ್ದರು. ಜತೆಗೆ ಅಲ್ಲಿಯೇ ಮೂವರ ಪುರಾಣಕಥೆಗಳನ್ನೆಲ್ಲ ಕೇಳಿಸಿಕೊಳ್ಳುವುದರ ಸೂಚನೆಯಂತೆ ಬಾಲ,